ದೃಢ ನಿರ್ಧಾರಕ್ಕೆ ಬಂದುಬಿಟ್ಟೆ. ಬಿಳಿಗಿರಿರಂಗನ ಬೆಟ್ಟದ ವಿವೇಕಾನಂದ ಗಿರಿಜನ ಕಲ್ಯಾಣ ಕೇಂದ್ರದಲ್ಲಿ ಕೆಲಸ ಮಾಡುವಾಗ ನನ್ನ ಜೊತೆಗಾರರಲ್ಲಿ ಕೆಲವರು ಈ ಕುರಿತು 'ಬೆಳಕು' ಚೆಲ್ಲಿದರು. ಈ ವಿಚಾರದಲ್ಲಿ ನನ್ನಷ್ಟೇ ಅಜ್ಞಾನಿಗಳನ್ನಾದರೂ ಸುಲಭವಾಗಿ ನಂಬಿ ಬಿಡುವ ನನಗೆ ತಮ್ಮ ಊಹೆಯನ್ನೇ ಅಪ್ಪಟ ವಾಸ್ತವವೋ ಎಂಬಂತೆ ಅವರು ವರ್ಣಿಸುತ್ತಿದ್ದರು. ಒಬ್ಬ ಮಹಾಶಯನ ಪ್ರಕಾರ, 'ಸೋಲಿಗರು ಒಂದು ವಿಶೇಷ ಬಗೆಯ ಸೊಪ್ಪನ್ನು ಅರೆದು ಮೈಗೆಲ್ಲ ಹಚ್ಚಿಕೊಳ್ಳುತ್ತಾರೆ; ಅದರ ವಾಸನೆಗೆ ಜೇನುಹುಳುಗಳು ಹತ್ತಿರ ಕೂಡ ಬಾರದೆ ದೂರ ಹೋಗುತ್ತವೆ, ಧೈರ್ಯವಾಗಿ ಜೇನು ಇಳಿಸುತ್ತಾರೆ'. ಕಣ್ಣಿಗೆ ಕಟ್ಟುವ ವರ್ಣನೆ ತಿಳಿಗಾಳಿಯಿಂದ ಹಾಗೇ ಅವತರಿಸಿತು! 'ಜೇನು ಇಳಿಸುವುದು' ಎಂದರೆ ಮರ ಏರಿ ಜೇನು ಕೀಳುವುದು. ಈ ಮಹಾಶಯ ಇಷ್ಟಕ್ಕೆ ನಿಲ್ಲಿಸಲಿಲ್ಲ. 'ಈ ಸೋಲಿಗರು ಬಾಳ ಪಾಕಡಾಗಳು ಸಾರ್, ಆ ಸೊಪ್ಪು ಯಾವುದು ಅಂದರೆ ಗುಟ್ಟು ಬಿಟ್ಟು ಕೊಡೋದೇ ಇಲ್ಲ ಸಾರ್' ಎಂಬ ಒಗ್ಗರಣೆಯನ್ನು ಸೇರಿಸಿ ನನ್ನನ್ನು ನಂಬಿಸಿಬಿಟ್ಟ. ಸೋಲಿಗರನ್ನು ಕೇಳಿದರೆ, 'ಅಂತಾದ್ದೇನೂ ಇಲ್ಲ ಚಾಮಿ' ಎನ್ನುತ್ತಿದ್ದರು. ಬಹುಶಃ ಗುಟ್ಟು ಬಿಟ್ಟುಕೊಡಲೊಲ್ಲರು ಎಂದು ಭಾವಿಸಿ ನಾನು ಸುಮ್ಮನಿದ್ದುಬಿಟ್ಟೆ. ಮತ್ತೊಬ್ಬ ಮಹಾಶಯ, 'ಸಾರ್, ಸೋಲಿಗರು ರಾತ್ರಿ ಬೆಂಕಿಹಾಕಿ ಜೇನು ಇಳಿಸುತ್ತಾರೆ; ರಾತ್ರಿ ಅವುಕ್ಕೆ ಕಣ್‌ಕಾಣೊಲ್ಲ, ಬೆಂಕಿ ತೋರ್ಸಿದ್ ಕೂಡ್ಲೆ ದಿಕ್ಕಾಪಾಲು ಹಾರಿ ಹೋಗ್ತಾವೆ. ಆಗ ಸುಲಭವಾಗಿ ಜೇನುಹುಟ್ಟುಗಳನ್ನ ಕೆಳಗೆ ಇಳೀಸ್‌ಬವ್ದು, ಹಗಲೊತ್ತು ಯಾವಾಗ್ಲೂ ಜೇನು ಇಳಿಸಲ್ಲ ಸಾರ್' ಎಂದ. ಇದೂ ಒಂದು ಸಾಧ್ಯವಿಧಾನ ಎಂದು ನಂಬಿ ಸುಮ್ಮನಿದ್ದುಬಿಟ್ಟೆ. ಆದರೆ, ಸೋಲಿಗರೊಡನೆ ಒಡನಾಟ ಹೆಚ್ಚಿದ ಮೇಲೆ ಈ ಎಲ್ಲ ಬುರುಡೆಗಳ ಮರ್ಮ ತಿಳಿಯಿತು; ಜೇನು ಇಳಿಸುವ ವಾಸ್ತವಾಂಶಗಳನ್ನು ಸೋಲಿಗರಿಂದಲೇ ಕೇಳಿ ತಿಳಿದುಕೊಂಡರೂ ಅದನ್ನು ಕಣ್ಣಾರೆ ನೋಡಬೇಕೆಂಬ ಆಸೆ ಬಹಳ ದಿನಗಳಿಂದಲೂ ಸುಪ್ತವಾಗಿ ನನ್ನ ಮನಸ್ಸಿನಲ್ಲಿ ಮನೆ ಮಾಡಿತ್ತು. ನನ್ನ ಆಸೆ ಜೇನುಗಳಿಗೆ ತಿಳಿಯಿತೆಂದು ಕಾಣುತ್ತದೆ! ನಾನು ಜೇನುಗೂಡನ್ನು ಹುಡುಕಿಕೊಂಡು ಹೋಗುವುದಿರಲಿ ಅವೇ ನನ್ನನ್ನು ಹುಡುಕಿಕೊಂಡು ಬಂದವು. ಬಿಳಿಗಿರಿರಂಗನ ಬೆಟ್ಟದ ನನ್ನ ತೋಟದಲ್ಲಿದ್ದ ದೊಡ್ಡ ನಂದಿ ಮರದ ಕೊಂಬೆಯಲ್ಲಿ ಒಂದು ಹೆಜ್ಜೇನು ಗೂಡು ಕಟ್ಟಿತು. ಅತಿ ಎತ್ತರದ ಕೊಂಬೆ, ಒಂದು ತೇಗದ ಮರವನ್ನು ಬಿಟ್ಟರೆ ಸುತ್ತ ಮುತ್ತ ಹೆಚ್ಚು ಮರಗಳಿರಲಿಲ್ಲ. ಪ್ರಖರವಾದ ಬಿಸಿಲಿಗೆ ಮೈಯೊಡ್ಡಿ ಇವು ಇಂತಹ ಸ್ಥಳದಲ್ಲಿ ಏಕೆ ಗೂಡು ಕಟ್ಟಿದವು ಎಂದು ಆಶ್ಚರ್ಯವಾಯಿತು. ಜೊತೆಗೆ, ಸೋಲಿಗರಿಂದ ಈ ಹೆಜ್ಜೇನನ್ನು ಇಳಿಸಬೇಕೆಂದೂ, ಅದನ್ನು ವಿಡಿಯೊ ಚಿತ್ರೀಕರಣ ಮಾಡಬೇಕೆಂದೂ ಆಲೋಚಿಸಿದೆ.

ಜೇನು ಇಳಿಸುವ ನಿಪುಣ ಸೋಲಿಗನಾರು ಎಂಬ ಪ್ರಶ್ನೆ ಮತ್ತು ಹುಡುಕಾಟ ಪ್ರಾರಂಭವಾಯಿತು. ಹಾಗೇ ಆಲೋಚಿಸುತ್ತಿದ್ದಾಗ ನಮ್ಮ ಹಲಗನ ಅಳಿಯ ಜಡೆಯಪ್ಪನ ನೆನಪು ಬಂತು. ಇವನು ನನ್ನ ಕಾಫಿ ತೋಟದಲ್ಲಿ ಆಗಾಗ ಮರ ಕಪಾತು ಕೆಲಸ ಮಾಡುತ್ತಾನೆ. ಮರ ಕಪಾತು ಎಂದರೆ ವರ್ಷವರ್ಷವೂ ದಟ್ಟವಾಗಿ ಬೆಳೆದು ನೆರಳುಗಟ್ಟುವ ಮರದ ಕೊಂಬೆಗಳನ್ನು ಕಡಿದು ಬಿಸಿಲಿಗೆ ದಾರಿ ಮಾಡಿಕೊಡುವುದು. ಜಡೆಯಪ್ಪ ಮರ ಹತ್ತುವುದನ್ನು ನೋಡುವುದೇ ಒಂದು ಸೋಜಿಗ! ಸಿಲ್ವರ್ ಮರಗಳು ನೇರವಾಗಿ ನೂರು ಅಡಿಗಳಷ್ಟು ಎತ್ತರಕ್ಕೆ ಬೆಳೆಯುತ್ತವೆ. ನಮ್ಮ ಜಡೆಯಪ್ಪ ಕಣ್ಣುಮುಚ್ಚಿ ಬಿಡುವುದರ ಒಳಗೆ ಕೈಯಲ್ಲಿ ಮಚ್ಚು ಹಿಡಿದು ಮರದ ತುದಿಗೆ ಏರಿರುತ್ತಾನೆ. ಅಲ್ಲಿರುವ ದಪ್ಪದಪ್ಪ ಕೊಂಬೆಗಳನ್ನು ಎರಡು ಅಥವಾ ಮೂರು ಏಟಿಗೆ ಕತ್ತರಿಸಿ ಕೆಡವುತ್ತಾನೆ. ಕೆಳಗೆ ಬಿದ್ದ ಈ ಉದ್ದನೆಯ ಕೊಂಬೆಗಳನ್ನು ನಮ್ಮ ಆಳುಗಳು ತುಂಡುಹಾಕಲು ಹತ್ತಾರು ಮಚ್ಚಿನ ಏಟು ಹಾಕುತ್ತ ಹೆಣಗುತ್ತಾರೆ. ಜಡೆಯಪ್ಪ ಮಾತ್ರ ಹೆಚ್ಚೆಂದರೆ ಎರಡು ಮೂರು ಏಟುಗಳಲ್ಲೇ ತುಂಡರಿಸುತ್ತಾನಲ್ಲ ಹೇಗೆ? ಇದೊಂದು ಒಗಟು, ಕೇಳಿದರೆ, 'ಅದರಲ್ಲೇನಿದೆ ಸಾ... ನ್ಯಾಕಾಗಿ ಹೊಡಿಬೇಕು ಅಷ್ಟೆ' ಎಂದುಬಿಡುತ್ತಾನೆ!